ರಾಜ್ಯದಲ್ಲಿನ ದೇವದಾಸಿಯರಿಗೆ ಪರಿಹಾರ ಧನ ಕೊಡುವ ಬಗ್ಗೆ

೫೯೦೭. ಶ್ರೀ ಆರ್. ವೆಂಕಟರಾವಮಯ್ಯ (ಮುಳಬಾಗಿಲು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗುರುತಿಸಲ್ಪಟ್ಟ ದೇವದಾಸಿಯರ ಸಂಖ್ಯೆ ಎಷ್ಟು ?

ಆ) ಪುನರ್ವಸತಿಗೊಂಡ ದೇವದಾಸಿಯರ ಸಂಖ್ಯೆ ಎಷ್ಟು ?

ಇ) ದೇವದಾಸಿಯರಿಗೆ ದೊರೆತಿರುವ ಪರಿಹಾರದ ಮೊತ್ತವೆಷ್ಟು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೬೦೧೮

ಆ) ೧೨೨೭ ದೇವದಾಸಿ ಮಹಿಳೆಯರಿಗೆ ಸರಕಾರದ ವಿವಿಧ ಯೋಜನೆಯಡಿಯಲ್ಲಿ ಸಹಾಯ ನೀಡಲಾಗಿದೆ.

ಇ) ೭೫ ದೇವದಾಸಿ ಮಹಿಳೆಯರ ಮದುವೆಗೆ ೨,೨೫,೦೦೦-೦೦ ಸಹಾಯಧನ ಕೊಡಲಾಗಿದೆ. ಇತರ ಇಲಾಖೆಯ ಯೋಜನೆಗಳಲ್ಲಿ ಕೊಟ್ಟಿರುವ ಸಹಾಯವು ವಸ್ತು ರೂಪದಲ್ಲಿ ಇರುವುದರಿಂದ ಇದರ ಒಟ್ಟು ಮೊತ್ತ ತಿಳಿಯಲಾಗುವುದಿಲ್ಲ.

ಉದಾ: ಜನತಾ ಮನೆ, ಭೂಮಿ, ಇತ್ಯಾದಿ.

ಬೆಂಗಳೂರಿನ ವಿಮಾನ ನಿಲ್ದಾಣವನ್ನು ಆಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಪರಿವರ್ತಿಸುವ ಬಗ್ಗೆ

೧೯೬೦. ಶ್ರೀ ಎನ್. ಎಂ. ಅಡ್ಕಂತಾಯ (ಸುರತ್ಕಲ್).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ವಿಮಾನ ನಿಲ್ದಾಣವನ್ನು ಆಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಪರಿವರ್ತಿಸುವ ಬಗ್ಗೆ ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಲು ರಾಜ್ಯ ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ?

ಆ) ಪ್ರಸ್ತುತ ಆಗ್ನೇಯ ಏಷ್ಯದ ಕೆಲವು ನಗರಗಳಾದ ಹಾಂಗ್‌ಕಾಂಗ್ ಸಿಂಗಪೂರ ಮತ್ತಿತರೆಡೆಗೆ ಬೆಂಗಳೂರಿನಿಂದ ನೇರ ವಿಮಾನಯಾನ ಏರ್ಪಡಿಸುವಲ್ಲಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾದಾಗ ಇದನ್ನು ಪರಿಶೀಲಿಸಲಾಗುವುದು.

ಚನ್ನಪಟ್ಟಣ ತಾಲ್ಲೂಕಿನ ಜಲಾಶಯದ ಸೈಫನ್ ಬಗ್ಗೆ

೧೮೪೫. ಶ್ರೀ. ಎಂ. ವರದೇಗೌಡ (ಚನ್ನಪಟ್ಟಣ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣ ತಾಲ್ಲೂಕು ಕಣ್ವ ಜಲಾಶಯಕ್ಕೆ ಈಗಿರುವ ''ಸೈಫನ್'' ತೆಗೆಸಿ ಬಾಗಿಲು ಇಡುವ ಯೋಜನೆ ಸರ್ಕಾರದವರಿಗಿದೆಯೇ ?

ಆ) ಹಾಗಿದ್ದಲ್ಲಿ ಯಾವ ಸಾಲಿನಿನಂದ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಘಟಪ್ರಭಾ ಎಡದಂಡೆ ನಾಲೆಯ ಮುಖ್ಯ ಕಾಲುವೆಯ ರಿಪೇರಿ ಬಗ್ಗೆ

೧೧೪೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷದ ಜುಲೈ ತಿಂಗಳಲ್ಲಿ ಘಟಪ್ರಭಾ ಎಡದಂಡೆ ನಾಲೆಯ ಮುಖ್ಯ ಕಾಲುವೆಯ ದುರಸ್ತಿ ಕುರಿತು ವರದಿ ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಆಗಿದ್ದಲ್ಲಿ ಇಂದಿನ ಬರಗಾಲದ ಸಮಯದಲ್ಲಿ ಜನರಿಗೆ ಉದ್ಯೋಗ ಒದಗಿಸುವ ಕಾರ್ಯದ ಅಂಗವಾಗಿ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಸರ್ಕಾರದವರು ಉದ್ದೇಶಿಸುವರೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಅಂದಾಜು ವೆಚ್ಚ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಕನ್ನಡದಲ್ಲಿ ವ್ಯವಹರಿಸುವ ಬಗ್ಗೆ

೧೯೦೪. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕನ್ನಡ ಭಾಷೆ ಯಾವ ವರ್ಷದಿಂದ ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ ?

ಆ) ರಾಜ್ಯದಲ್ಲಿಯು ಅಂಚೆ ಮತ್ತು ತಂತಿ ಇಲಾಖೆಯು ಕನ್ನಡದಲ್ಲಿ ವ್ಯವಹರಿಸುವ ವ್ಯವಸ್ಥೆ ಮಾಡಲು ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ, ಯಾವ ವರ್ಷದಿಂದ ಅದನ್ನು ಜಾರಿಗೆ ತರಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೬೩ ರಿಂದ

ಆ) ಕರ್ನಾಟಕ ರಾಜಭಾಷಾ ಅಧಿನಿಯಮವು ೧೯೬೩ ರಿಂದ ಸರ್ಕಾರದ ಇಲಾಖೆಗಳಿಗೆ ಅನ್ವಯವಾಗುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೀಳಗಿ ತಾಲ್ಲೂಕಿಗೆ ಅಂಗನವಾಡಿ ಯೋಜನೆ

೧೪೨೯. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಐ.ಸಿ.ಡಿ.ಎಸ್. ಯೋಜನೆಗಳೆಷ್ಟು ?